# ಸರಸ್ವತಿಪುರಂನಲ್ಲಿ ನಿತ್ಯ ಕಲ್ಯಾಣ ಸಮಾರಂಭ

ಚಿತ್ರದುರ್ಗ ಆ. 24 - ಸತ್ಸಂಗದ ಮೂಲಕ ಪರಿಣಾಮಕಾರಿ ಅನುಭವ ಪಡೆಯಬಹುದು. ಸತ್‌ಚಿಂತನೆ ಬದುಕಿನ ನೋವನ್ನು ಹೋಗಲಾಡಿಸುತ್ತದೆ. ಬದುಕಿನಲ್ಲಿ ನೊಂದವರು ಶರಣರ ಸತ್ಸಂಗವನ್ನು ಅನುಭವಿಸಿದರೆ ಮನಸ್ಸು ಹಗುರವಾಗುತ್ತದೆ. ದೇಹದ ದಣಿವನ್ನು ನಿವಾರಿಸುವ ಶಕ್ತಿ ಅಧ್ಯಾತ್ಮದಲ್ಲಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಸರಸ್ವತಿಪುರಂನ ವಾಸಿ ಆರ್. ಶಿವಶಂಕರ ಅವರ ಮನೆಯಲ್ಲಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಅಧ್ಯಾತ್ಮ: ಅದರಿಂದಾಗುವ ಪ್ರಯೋಜನ (ಬುದ್ಧಿ+ಶುದ್ಧಿ=ಸಿದ್ಧಿ) ವಿಷಯ ಚಿಂತನ ಮಾಡಿದ ಶ್ರೀಗಳು, ಅಧ್ಯಾತ್ಮ ಶಬ್ದವನ್ನು ಬಹಳ ಜನ ಕೇಳಿಸಿಕೊಂಡಿರುತ್ತಾರೆ. ಅದು ಶ್ರೇಷ್ಠವಾದ ಜ್ಞಾನ. ಪರಿಶುದ್ಧವಾದ ಜ್ಞಾನ. ವ್ಯಕ್ತಿತ್ವವನ್ನು ಎತ್ತರಿಸುವ ಜ್ಞಾನ. ಹಾಗಾದರೆ ಯಾವುದು ಅಧ್ಯಾತ್ಮ? ಅಧ್ಯಾತ್ಮ ಎಂದರೆ ಸಮಯೋಚಿತವಾದ ಪ್ರಾರ್ಥನೆ. ಪ್ರಾರ್ಥನೆಯನ್ನು ತನ್ಮಯರಾಗಿ ಕೇಳುವುದೇ ಅಧ್ಯಾತ್ಮ. ಅಧ್ಯಾತ್ಮ ಎಂದರೆ ಆಸ್ವಾದಿಸುವುದು ಅನುಭವಿಸುವುದು. ಅಧ್ಯಾತ್ಮ ಎಂದರೆ ಆನಂದ. ಭೌತಿಕ ವಸ್ತುಗಳಲ್ಲಿ ತಾತ್ಕಾಲಿಕವಾದ ಸುಖ ಸಿಗುತ್ತದೆ. ಆದರೆ ಅಧ್ಯಾತ್ಮದಿಂದ ಸದಾ ಕಾಲ ನೆಮ್ಮದಿ ಸಿಗುತ್ತದೆ ಎಂದು ನುಡಿದರು.

ಗಾಂಧೀಜಿಯವರು ಪ್ರಾರ್ಥನೆಯ ಮೂಲಕ ಬ್ರಿಟೀಷರನ್ನು ಗೆದ್ದರು. ಪ್ರಾರ್ಥನೆಯಲ್ಲಿ ಪರಿಣಾಮತ್ವ ಇರಬೇಕು. ಭಜನೆಯಲ್ಲಿಯೂ ಆಧ್ಯಾತ್ಮಿಕವಾದ ಪರಿಣಾಮ ಇದೆ. ಸತ್ಸಂಗದ ಮೂಲಕ ಪರಿಣಾಮಕಾರಿ ಅನುಭವ ಪಡೆಯಬಹುದು. ಸತ್‌ಚಿಂತನೆ ಬದುಕಿನ ನೋವನ್ನು ಹೋಗಲಾಡಿಸುತ್ತದೆ. ಬದುಕಿನಲ್ಲಿ ನೊಂದವರು ಶರಣರ ಸತ್ಸಂಗವನ್ನು ಅನುಭವಿಸಿದರೆ ಮನಸ್ಸು ಹಗುರವಾಗುತ್ತದೆ. ದೇಹದ ದಣಿವನ್ನು ನಿವಾರಿಸುವ ಶಕ್ತಿ ಅಧ್ಯಾತ್ಮದಲ್ಲಿದೆ ಎಂದರು.

ಸಮಾಜವೆಂಬ ಗ್ರಂಥವನ್ನು ಓದುತ್ತ ಹೋದಂತೆ ಆತ್ಯಂತಿಕವಾದ ಅನುಭವಗಳಾಗುತ್ತವೆ. ಲೋಕಾನುಭವ ಗಳಾಗಬೇಕು. ಅಲ್ಲಮರ ನಿಸರ್ಗವೆಂಬ ಗ್ರಂಥವನ್ನು ಓದಬೇಕು. ಬಸವಣ್ಣನವರು ಸಮಾಜವೆಂಬ ಗ್ರಂಥ ಓದಿದರು. ಕುವೆಂಪು ಅವರು ಸಹ ನಿಸರ್ಗದ ಜೊತೆ ಸಂಪರ್ಕ ಇಟ್ಟುಕೊಂಡಿದ್ದರು. ಪ್ರಕೃತಿಯನ್ನು ಓದಬೇಕು. ಮುಖಭಾವವನ್ನು ಅಧ್ಯಯನ ಮಾಡಬೇಕು. ಹೃದಯಗಳನ್ನು ಓದಬೇಕು. ಧ್ಯಾನದ ಮುಖಾಂತರ ಏಕಾಗ್ರತೆಯನ್ನು ಸಾಧಿಸಬಹುದು. ಅಧ್ಯಾತ್ಮವು ಅಧೀರತೆಯನ್ನು ನಿವಾರಣೆ ಮಾಡುತ್ತದೆ. ಅಧ್ಯಾತ್ಮದ ಉತ್ತುಂಗವೆಂದರೆ ಸಾತ್ವಿಕತೆ ಮತ್ತು ನಿರ್ಲಿಪ್ತತೆ ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ಹಾವೇರಿಯ ಅಗಡಿ ಅಕ್ಕಿಮಠದ ಶ್ರೀ ಗುರುಲಿಂಗ ಸ್ವಾಮಿಗಳು ಮಾತನಾಡಿ, ಮನಸ್ಸನ್ನು ವಿಶಾಲ ಮಾಡಿಕೊಳ್ಳುವುದೇ ಅಧ್ಯಾತ್ಮ. ವಿದೇಶಿಗರು ಭಾರತಕ್ಕೆ ಅಧ್ಯಾತ್ಮ ಕಲಿಯಲು ಬರುತ್ತಿದ್ದಾರೆ. ಬುದ್ಧ, ಏಸುವಿನ ಕಾಲದಿಂದ ಅಧ್ಯಾತ್ಮ ಇತ್ತು. ಅವರು ಸಂಪತ್ತಿನ ಹಿಂದೆ ಹೋಗಲಿಲ್ಲ. ಅಧ್ಯಾತ್ಮದ ದಾರಿ ಹಿಡಿದುಕೊಂಡು ಹೋದರೆ ಜಗಳವಿಲ್ಲ. ಶರಣರ ಜೀವನ ಅಧ್ಯಾತ್ಮದ ಬದುಕಾಗಿತ್ತು. ಬಸವಣ್ಣನವರು ಅಧ್ಯಾತ್ಮದ ಜೊತೆ ಸಾಗದಿದ್ದರೆ ಇಂದು 770 ಗಣಂಗಳು ನಮಗೆ ಸಿಗುತ್ತಿರಲಿಲ್ಲ. ನೋಡುವ ನೋಟದಲ್ಲಿ ಆಧ್ಯಾತ್ಮಿಕತೆ ಇದೆ ಎಂದು ನುಡಿದರು.

ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ. ತಿಪ್ಪೇಸ್ವಾಮಿ ಮಾತನಾಡಿ, ಹಬ್ಬ ಎಂದರೆ ಕಣ್ಣಿನ ನೋಟಕ್ಕೆ ನಾಲಿಗೆ ರುಚಿಗೆ ಹಬ್ಬವಲ್ಲ. ನಮ್ಮ ಬುದ್ಧಿಗೆ ಜ್ಞಾನಕ್ಕೆ ವಿಚಾರಗಳ ಚಿಂತನ ಮಂಥನವೂ ಹಬ್ಬ. ಮನುಷ್ಯ ಹುಟ್ಟಿದ ತಕ್ಷಣ ಎಲ್ಲ ಸಂಸ್ಕಾರಗಳನ್ನು ಕಲಿಯುವುದಿಲ್ಲ. ಸಂಘ-ಸಂಸ್ಥೆ, ಧಾರ್ಮಿಕ ಮುಖಂಡರ ಮೂಲಕ ಸಂಸ್ಕಾರ ಸಿಗುತ್ತ ಹೋಗುತ್ತದೆ. ಸಂಸ್ಕಾರವಿಲ್ಲದೆ ಇದ್ದಾಗ ಅಂಥವರು ಸಮಾಜಕ್ಕೆ ಕಂಟಕವಾಗುತ್ತಾರೆ. ದಾರಿ ತಪ್ಪಿದಾಗ ನಮಗೆ ಕಾಣುವುದೇ ಮಠಮಾನ್ಯಗಳು.

ಮನುಷ್ಯನ ವ್ಯಕ್ತಿತ್ವ ನಿರ್ಮಾಣ ಸುಲಭದ ಕೆಲಸವಲ್ಲ. ರಾಷ್ಟ್ರದ ನಿಜವಾದ ಸಂಪತ್ತು ಎಂದರೆ ಆ ದೇಶದ ಜನರು. ಉತ್ತಮ ಸಂಸ್ಕಾರ ಇರುವವರೇ ನಿಜವಾದ ಸಂಪತ್ತು. ದೇಶದ ಶ್ರೇಷ್ಟ ಸಂಪತ್ತು ಮಾನವನ ವ್ಯಕ್ತಿತ್ವದಲ್ಲಿ ಅಡಗಿದೆ ಎಂದರು.

ಐಶ್ವರ್ಯ ಗ್ರೂಪ್‌ನ ಶರಣ್, ಬಿಜೆಪಿ ರೈತಮೋರ್ಚಾದ ವೆಂಕಟೇಶ್, ಕಾರ್ಯಕ್ರಮದ ಪ್ರಾಯೋಜಕರಾದ ಆರ್. ಶಿವಶಂಕರ್ ವೇದಿಕೆಯಲ್ಲಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಶ್ರೀಮತಿ ಅನ್ನಪೂರ್ಣ ಲಿಂಗರಾಜು ನಿರೂಪಿಸಿದರು. ಶ್ರೀಮತಿ ಪಲ್ಲವಿ ಸ್ವಾಗತಿಸಿದರು.




